**ದಿನಾಂಕ: 23-01-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ ವಿ.ಸಿ.ಎಂ.ಪಿ. ವಕೀಲರಿಂದ**

1. ಅಪಘಾತವಾದ ಸಮಯದಲ್ಲಿ ನನಗೆ 54 ವರ್ಷ ಎಂದು ಉತ್ತರಿಸಿ 44 ವರ್ಷ ವಯಸ್ಸಾಗಿತ್ತು ಎಂದು ಉತ್ತರಿಸುತ್ತಾರೆ. ನನ್ನ ವಯಸ್ಸು ತೋರಿಸಲು ಆಧಾರ್ ಕಾರ್ಡ್ ಹಾಜರುಪಡಿಸಿಲ್ಲ. ನಿಮ್ಮ ವಯಸ್ಸು 55 ವರ್ಷಕ್ಕಿಂತ ಹೆಚ್ಚು ಇದೆ ಎಂದರೆ 40 ಎಂದು ಉತ್ತರಿಸುತ್ತಾರೆ. ನಾನು ಒಕ್ಕಲುತನ ಮತ್ತು ಚಾಲಕನಾಗಿ ಕೆಲಸ ಮಾಡುತ್ತಿದ್ದೆನು. ನನ್ನ ಹೆಸರಿಗೆ 2 ಎಕರೆ ಹೊಲ ಇರುತ್ತದೆ. ಅದರ ಪಹಣಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿದ್ದೇನೊ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಚಾಲಕನಾಗಿದ್ದೇನೆ ಎಂದು ತೋರಿಸಲು ನ್ಯಾಯಾಲಯಕ್ಕೆ ಡ್ರೈವಿಂಗ್ ಲೈಸೆನ್ಸ್ ಹಾಜರುಪಡಿಸಿರುತ್ತೇನೆ. ನನಗೆ ತಿಂಗಳಿಗೆ 45 ಸಾವಿರ ಆದಾಯ ಬರುತ್ತಿತ್ತು. ಒಕ್ಕಲುತನದಿಂದ ಮತ್ತು ಚಾಲಕನ ಕೆಲಸದಿಂದ ಇಷ್ಟು ಆದಾಯ ಬರುತ್ತಿತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. ನಿಮಗೆ 25 ಸಾವಿರ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ಎರಡು ವರ್ಷಗಳ ಹಿಂದೆ ಟ್ರ್ಯಾಕ್ಟರ್ ರಿಪೇರಿಗಾಗಿ ಹೋಗಿದ್ದೆನು. ಟ್ರ್ಯಾಕ್ಟರ್ ನಿಮ್ಮ ಹೆಂಡತಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸದರಿ ಟ್ರ್ಯಾಕ್ಟರನ್ನು ಸಂಗಣ್ಣ ಚಾಲನೆ ಮಾಡುತ್ತಿದ್ದನು. ಟ್ರ್ಯಾಕ್ಟರಿಗೆ ಪಂಪ್ ಹೊಡೆಯುತ್ತಿದ್ದೆ ಆಗ ಚಾಲಕ ಸಂಗಣ್ಣ ಟ್ರ್ಯಾಕ್ಟರನ್ನು ಚಾಲು ಮಾಡಿದನು ಎಂದು ಉತ್ತರಿಸುತ್ತಾರೆ. ಅಪಘಾತವಾದಾಗ ನಾನು ಟ್ರ್ಯಾಕ್ಟರನ ಟೈರ್ ಹತ್ತಿರ ನಿಂತಿದ್ದೆನು. ಆಗ ಚಾಲಕನು ಒಮ್ಮೆಲೇ ಟ್ರ್ಯಾಕ್ಟರನ್ನು ಚಾಲು ಮಾಡಿದ್ದರಿಂದ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಟ್ರ್ಯಾಕ್ಟರನ ಗಾಲಿ ಹತ್ತಿರ ನಿಂತಿದ್ದು ಸದರಿ ಅಪಘಾತವು ನಿಮ್ಮ ತಪ್ಪಿನಿಂದಾಗಿದೆ ಎಂದರೆ ಸರಿಯಲ್ಲ.

3. ಅಪಘಾತವಾದ ನಂತರ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಬಂದಿರುತ್ತೇನೆ. ಆ ದಿನ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಬಂದು ರಾತ್ರಿ ಬಂದು ನಂತರ ಕಲ್ಬುರ್ಗಿಯ ಕುರಾಳ ಆಸ್ಪತ್ರೆಗೆ ಹೋಗಿರುತ್ತೇನೆ. ಕುರಾಳ ಆಸ್ಪತ್ರೆಯಲ್ಲಿ 11 ದಿನ ಇದ್ದೆನು. ದೂರನ್ನು ನನ್ನ ಅಣ್ಣನ ಮಕ್ಕಳು ಕೊಟ್ಟಿರಬಹುದು. ದೂರನ್ನು ನೀವೇ ಕೊಟ್ಟಿದ್ದೀರಿ ಎಂದರೆ ಸರಿ. ದಿನಾಂಕ 24-01-2024 ರಂದು ಅಪಘಾತವಾಗಿದೆ 2 ದಿನ ತಡವಾಗಿ ದಿನಾಂಕ 26-01-2024 ರಂದು ದೂರನ್ನು ನೀಡಿದ್ದೀರಿ ಎಂದರೆ ನನಗೆ ಆಗ ಅರಿವು ಇರಲಿಲ್ಲ ಎಂದು ಉತ್ತರಿಸುತ್ತಾರೆ. ನನಗೆ 2-3 ದಿನಗಳ ನಂತರ ಅರಿವು ಬಂದಿರುತ್ತದೆ. ನೀವು, ನಿಮ್ಮ ಹೆಂಡತಿ ಮತ್ತು ಪೊಲೀಸರು ಕೂಡಿಕೊಂಡು ಈ ವಾಹನದ ಮೇಲೆ ಉದ್ದೇಶಪೂರ್ವಕವಾಗಿ ದೂರನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ನೀವೇ ಬಿದ್ದು ಗಾಯ ಮಾಡಿಕೊಂಡಿದ್ದರೂ ಸಹ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಈ ವಾಹನವನ್ನು ಸೇರಿಸಿಕೊಂಡಿದ್ದೀರಿ ಎಂದರೆ ಸರಿಯಲ್ಲ.

4. ಕುರಾಳ ಆಸ್ಪತ್ರೆಯಲ್ಲಿ ನಾಲ್ಕೂವರೆ ಲಕ್ಷ ಹಣ ಖರ್ಚಾಗಿರುತ್ತದೆ. ಅವುಗಳ ವೈದ್ಯಕೀಯ ಬಿಲ್ಲುಗಳನ್ನು ಹಾಕಿರುತ್ತೇನೆ. ಎಲ್ಲಾ ಆಸ್ಪತ್ರೆಯಲ್ಲಿ ಕಂಪ್ಯೂಟರೈಸಡ್ ಬಿಲ್ಲು ಕೊಡುತ್ತಾರೆ ಎಂದರೆ ಸರಿ. ಈ ಕೇಸಿನಲ್ಲಿ ಕೈಯಿಂದ ಬರೆದಿರುವಂತಹ ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಈ ಕೇಸಿನಲ್ಲಿ ಪರಿಹಾರ ಪಡಯುವ ಉದ್ದೇಶದಿಂದ ವೈದ್ಯಕೀಯ ಚೀಟಿ ಮತ್ತು ವೈದ್ಯಕೀಯ ಬಿಲ್ಲುಗಳನ್ನು ಸೃಷ್ಠಿ ಮಾಡಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

5. ದಿನಾಂಕ 10-06-2020 ರ ಎರಡು ಬಿಲ್ಲುಗಳನ್ನು ಈ ಕೇಸಿನಲ್ಲಿ ಸೃಷ್ಠಿ ಮಾಡಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ಅನುಕೂಲಕ್ಕೆ ತಕ್ಕಂತೆ ನಿಪಿ-9 disability certificate ಸೃಷ್ಠಿ ಮಾಡಿ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಯಾವುದೇ ಆಧಾರ ಇಲ್ಲದೇ ಇದ್ದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಕೇಸನ್ನು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ